ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/ಶೈವಿ/276/ಪು.ಖ/2019-20

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು-560001.
ದಿನಾಂಕ: 03.10.2022.

**ಸುತ್ತೋಲೆ**

ವಿಷಯ : ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರಕವಾಗಿರುವ ಪುಸ್ತಕಗಳನ್ನು ಖರೀದಿಸಲು ಅನುಮತಿ ನೀಡುವಂತೆ ಕೋರಿರುವ ಕುರಿತು.

ಉಲ್ಲೇಖ : ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಶಿವಮೊಗ್ಗ ಇವರ ಪತ್ರಸಂಖ್ಯೆ : ಕಾಶಿಇ/ಪ್ರಾಕಶಿ/381/2022-23, ದಿನಾಂಕ : 11.08.2022.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಶ್ರೀ ಪ್ರದೀಪ್ ಕುಮಾರ್ ಜೆ.ಪಿ ಇವರು ರಚಿಸಿರುವ "ಸಮಗ್ರ ಕರ್ನಾಟಕ ಇತಿಹಾಸ" ಹಾಗೂ ಶ್ರೀ ಆಂಜನೇಯ ಕೆ.ಹೆಚ್ ಇವರು ರಚಿಸಿರುವ "ಸುರಭಿ ಕನ್ನಡ ವ್ಯಾಕರಣ ಹಾಗೂ ಸಾಮಾನ್ಯ ಕನ್ನಡ" ಪುಸ್ತಕವನ್ನು ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಹಾಗೂ ಸಾಮಾನ್ಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಪೂರಕವಾಗಲಿರುವುದರಿಂದ ಸದರಿ ಪುಸ್ತಕಗಳನ್ನು ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಖರೀದಿಸಲು ಅನುಮತಿ ನೀಡುವಂತೆ ಉಲ್ಲೇಖಿತ ಪತ್ರಗಳಲ್ಲಿ ಕೋರಿರುತ್ತಾರೆ.

ಈ ಸಂಬಂಧ, ಕಾಲೇಜಿನ ವಿದ್ಯಾರ್ಥಿಗಳಿಗೆ / ಅಧ್ಯಾಪಕರುಗಳಿಗೆ ಉಪಯುಕ್ತವಾಗಿದ್ದಲ್ಲಿ ಕಾಲೇಜಿನ ಗ್ರಂಥಾಲಯ ಪುಸ್ತಕ ಸಮಿತಿಯು ಪರಿಶೀಲಿಸಿ, ಅಗತ್ಯವಿದ್ದಲ್ಲಿ ವಾಚನಾಲಯ ಖಾತೆಯಲ್ಲಿನ ಅನುದಾನದ ಲಭ್ಯತೆ ಮೇರೆಗೆ ನಿಯಮಾನುಸಾರ ಗ್ರಂಥಾಲಯಕ್ಕೆ ಖರೀದಿಸಲು ಅನುಮತಿ ನೀಡಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಶಿವಮೊಗ್ಗ.
2. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು- ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.

ಪ್ರತಿಯನ್ನು:

1. ಶ್ರೀ ಪ್ರದೀಪ್ ಕುಮಾರ್ ಜೆ.ಪಿ, ನಂ. 576/2, ಗಣೇಶ ನಿಲಯ, 1ನೇ ಮೇನ್, 4ನೇ ಕ್ರಾಸ್, ಕೆ.ಬಿ ಬಡಾವಣೆ, ದಾವಣಗೆರೆ.
2. ಶ್ರೀ ಆಂಜನೇಯ ಕೆ.ಎಚ್, ಮಾರುತಿನಗರ, ಕುಂದೂರು, ಹೊನ್ನಾಳಿ ತಾ., ದಾವಣಗೆರೆ ಜಿಲ್ಲೆ.
3. ಕಛೇರಿ ಪ್ರತಿ.